ಇರ್ತದೆ.. ಆದ್ರೆ ಕೊನೆಗೂ ಅದು ಸಿಗ್ದೆ ಸತ್ತೋತನೆ...' ಅಂದನು. ದೇವರಿಗೆ ಸಂಜೀವನ ಮಾತಿಗೆ ಪ್ರತಿಕ್ರಿಯೆ ಕೊಡುವ ದಾರಿ ತೋರಲಿಲ್ಲ. 'ಕೊನೆಗೂ ಭೂಮಿ ಸಿಗದೆ ಸತ್ತೋಗ್ತನೆ' ಅನ್ನುವ ಅವನ ಮಾತು ದೇವರಲ್ಲಿ ಅವ್ಯಕ್ತ ಆತಂಕ ಮೂಡಿಸಿತ್ತು. 'ನಂಗರ್ಥ ಆತದೆ ಮಾಮ. ಇಷ್ಟ್ ವರ್ಷ ಅಷ್ಟು ದುಡಿದ್ರೂ ನಿಂದೂ ಅಂತ ಒಂದಂಗುಲ ನೆಲ ಇಲ್ಲ... ಇಲ್ಲಿವರೆಗಿನ ಸರ್ಕಾರಿ ಪ್ರೋಗ್ರಾಂಗಳು ಷೆಡ್ಯೂಲ್ ಕ್ಯಾಸ್ಟ್‌ಗಳಿಗೆ ಭೂಮಿ, ವಸತಿ ಕೊಟ್ರೂ ನಿಮ್ದು ಅಲೆಮಾರಿ ಜಾತಿ ಆಗಿರದ್ರಿಂದ ಎಲ್ಲಾ ಮಿಸ್ಸಾಗವೆ. ನೀನು ನಮ್ಮೂರಿಗ್ ಬಂದು ಹತ್ರ ಹತ್ರ ನಲವತ್ತೈದು ವರ್ಷ ಆಗವೆ. ಒಂದ್ ರೇಷನ್ ಕಾರ್ಡ್ ಮಾಡ್ಸಕೆ ಅದೆಷ್ಟೊರ್ಷ ತಗಂಡೆ.. ಹೆಂಗೋ ಲಂಕೆಪ್ಪ ಆಂಕಲ್ ಅಂಥೋರು ಇದ್ದಿದ್ಕೆ ಒಂದು ಮನೆ ಆಯ್ತು' ಅಂದ ಸಂಜೀವನೆದುರು ದೇವರು ಸಣ್ಣ ಮಗುವಂತೆ ತಲೆಯಾಡಿಸುತ್ತಾ ನಿಂತನು. 'ಏ ಅಪ್ಪಿಗೇನಾಗದೋ... ನಮ್ಮೂರಿಗ್ ಬಂದಾಗಿಂದ ನಮ್ಮನೆ ಮಗಂತರಾ ಬೆಳ್ದವ್ನೆ... ಯಾವತ್ತಾನ ಜಾತಿ ಹಿಡ್ದು ಮಾತಾಡ್ಸಿದಿವಾ... ಲಂಕೆಪ್ಪ ಹೇಳ್ದ ಅಂತ ಹೊಲ ಕೊಟ್ವೆ.. ಈಗ ನೋಡು ನಮ್ ತೋಟ ಎಲ್ಲಾ ಅವ್ನುದ್ದೆ... ಇನ್ನೇನು ಮಗುಳ್ಗೆ ಮದ್ವೆ ಮಾಡದೊಂದೇ ಬಾಕಿ... ನೀನೇನೇನೋ ಹೇಳಿ ಅವುನ್ ತಲೆ ಕೆಡಿಸ್ಬೇಡ' ರೇಗಿದ ಗೌಡರು, 'ಇವ್ನು ಎಸ್ಸಿ ಎಸ್ಟಿನೂ ಅಲ್ಲವಲ್ಲ... ಅವ್ರುಗೆ ಮೀಸಲಾತಿ ಅದೆ.. ಎಲ್ಲ ಬತ್ತದೆ... ಇವ್ನುಗ್ನೇನದೆ...' ಅಂದು ತಮ್ಮ ರಾಜಕೀಯ ಎದುರಾಳಿಗಳನ್ನು ಬೈಯಲು ತೊಡಗಿದರು. ದೇವರಿಗೆ ಮತ್ತದೇ ಕನಸು... 'ಕಾಗದ ತಗಂಡು ಬಾರೋ ದೇವ್ರೇ ಕೆಳಗಿನ್ ತುಂಡಾ ನಿನ್ನೆಸ್ರಿಗೇ ಬರ್ಕೊಟ್ ಬಿಡ್ತೀನಿ.'

ಚೆಲುವಿ ಹುಟ್ಟಿದ ವರ್ಷವೇ ಜಯಮ್ಮನವರು ಸಂಜೀವನನ್ನು ಹೆತ್ತಿದ್ದರು. ದೇವರ ಕೈಯಲ್ಲೇ ಬೆಳೆದ ಸಂಜೀವ ಅವನನ್ನು 'ಮಾಮ' ಎಂದೇ ಸಂಬೋಧಿಸುತ್ತಿದ್ದನು. ತನ್ನ ವಾರಿಗೆಯವರಾದ ಮಾದಿಗರ ಕೇರಿಯ ಉಮಾಶಂಕ್ರ, ಬಸು ಮತ್ತು ಹರ್ಷನ ಜೊತೆಗೆ ಲಂಕೆಪ್ಪನವರ ಮಗ ವಿಕಾಸ ಇವನ ಪ್ರಾಣಸ್ನೇಹಿತರು. ಈ ಕಾರಣಕ್ಕೆ ಚಳವಳಿಗಳ ಸಖ್ಯದಲ್ಲೇ ಬೆಳೆದ ಸಂಜೀವ ಅರ್ಥಶಾಸ್ತ್ರದ ಎಂ.ಎ ಓದಿದರೂ ಅಂಬೇಡ್ಕರ್, ಗಾಂಧಿ, ಲೋಹಿಯಾ ಮತ್ತು ಕಾರ್ಲ್‌ಮಾರ್ಕ್ಸ್ ಎಲ್ಲರನ್ನೂ ಆಳವಾಗಿ ಓದಿಕೊಂಡಿದ್ದ. ಸದ್ಯಕ್ಕೆ ಹೈಸ್ಕೂಲೊಂದರಲ್ಲಿ ಮಕ್ಕಳಿಗೆ ಸಮಾಜವಿಜ್ಞಾನ ಪಾಠ ಹೇಳಿಕೊಡುತ್ತಿದ್ದ. ದೇವರನ್ನು ತನ್ನ ಕುಟುಂಬದಂತೆಯೇ ಭಾವಿಸುತ್ತಿದ್ದ ಸಂಜೀವನಿಗೆ ತನ್ನ ಜೊತೆಯಲ್ಲೇ ಬೆಳೆದ ಚೆಲುವಿಯೆಂದರೆ ಹೇಳಿಕೊಳ್ಳಲಾಗದ ಪ್ರೀತಿ. ಅವಳೂ ರಾಜ್ಯಶಾಸ್ತ್ರದಲ್ಲಿ ಎಂ.ಎ ಓದಲು ಪ್ರೇರೇಪಿಸಿದವನು ಇವನೇ. ಅವಳಿಗೂ ಸಂಜೀವನೆಂದರೆ ಜೀವ; ಮಾತಿಗೆ ನಿಲುಕದ ಅವ್ಯಕ್ತ ಭಾವ...

ದೇವರ ಕಣ್ಣಲ್ಲಿ ಕಂಬನಿ ಕಂಡಾಗಿಂದ ಸಂಜೀವನಿಗೆ ಒಂಥರಾ ಸಂಕಟ ಶುರುವಾಯಿತು. ಇದನ್ನು ಗೆಳೆಯರೊಟ್ಟಿಗೆ ಹಂಚಿಕೊಂಡ. ವಿಕಾಸ ತನ್ನ ಅಪ್ಪನ ಸ್ನೇಹಿತ ಮುನಿರಾಜಣ್ಣನಿಗೆ ಫೋನ್ ಮಾಡಿದ. ದಲಿತ ಚಳವಳಿಯಿಂದಲೇ ಬೆಳೆದ ಮುನಿರಾಜು ದೂರದ ಜಿಲ್ಲೆಯೊಂದರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯಾಗಿದ್ದರು. 'ಸರ್ಕಾರದ ಸವಲತ್ತುಗಳು ಕೇವಲ ಎಸ್ಸಿ ಎಸ್ಟಿಗಳಿಗೇ ಇಲ್ಲ. ಅಲೆಮಾರಿಗಳು ಮತ್ತು ಬುಡಕಟ್ಟು ಸಮುದಾಯಗಳಿಗಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿಶೇಷ ಕಾರ್ಯಕ್ರಮಗಳಿವೆ. ಈಗ ಸರ್ಕಾರ 'ಅಲೆಮಾರಿ ಕೋಶ' ಅಂತ ಮಾಡಿದೆ. ಅಲೆಮಾರಿ ಜನರನ್ನು ಗುರುತಿಸಿ ಅಂಬೇಡ್ಕರ್ ಅಭಿವೃದ್ಧಿ ನಿಮಗದ ಅಧಿಕಾರಿಗಳ ಮೂಲಕ ಜಮೀನು ಕೊಳ್ಳಲು ಹಣ ಕೊಡ್ತಾರೆ. ಇದು ಹೊಸ ಪ್ರೋಗ್ರಾಂ. ಕೊಳ್ಳಲು ಜಮೀನು ಗುರುತಿಸಿ ಮಾರುವವರ ಜತೆ ಮಾತನಾಡಿ ಸದ್ಯದ ಜಮೀನಿನ ದರವನ್ನು ಪರಿಶೀಲಿಸಿ ಎರಡು ಎಕರೆವರೆಗೂ ಭೂಮಿ ಕೊಡಿಸಬಹುದು...' ಮುನಿರಾಜಣ್ಣನ ಮಾತಿನಿಂದ ಗೆಳೆಯರ ಮುಖದಲ್ಲಿ ಮಂದಹಾಸ ಮೂಡಿತು. ಸಂಜೀವ ವಿಕಾಸನನ್ನು ಕರೆದುಕೊಂಡು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ ಶ್ರೀಪಾದಭಟ್ಟರನ್ನು ಭೇಟಿಯಾಗಿ ಬಂದ... ಮನೆಗೆ ಬಂದು ಊಟಕ್ಕೆ ಕುಳಿತಾಗ ಭರಮಪ್ಪ ಗೌಡರ ಜತೆ ಮಾತು ಶುರು ಮಾಡಿದ. 'ಅಪ್ಪ ಇಷ್ಟ್ ವರ್ಷ ದೇವ್ರು ಮಾಮ ನಮ್ಮ ಕೆಳಗಿನ ತುಂಡದಲ್ಲಿ ರಾಗಿ ಬೆಳ್ಕಂಡು ಬಂದದೆ. ಪಾಪ ಸಾಯೋ ಟೈಮಲ್ಲಿ ಅವುರ್ದು ಅಂತ ಒಂದಿಷ್ಟು ಭೂಮಿ ಇರ್ಲಿ. ಕೊಟ್ಬುಡಾನ..' ಗೌಡರು ಕಣ್ಣು ಕಿರಿದು ಮಾಡಿಕೊಂಡು, 'ಇದೇನೋ ಹೊಸ ವರಸೆ.. ಈಗ್ಲೂ ಅವುನ್ದೇ ತಾನೆ ಜಮೀನು... ಈಗ್ಬೇರೆ ಊರಿನ್ ಸುತ್ತಾ ಬೂಮಿ ರೇಟು ಗಗನುಕ್ಹೋಗದೆ...'